ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು	ಚಾಲ್ತಿ
ಅಕ್ಕಿ	ರೂಪಾಯಿಗೆ ...	7¾	6½ ರಿಂದ 7 ರವರೆಗೆ
ರಾಗಿ	,, ...	10¼	14 ರಿಂದ 15½ ವರೆಗೆ

ಸೇರುಗಳು.

ಭೈನನ್ನಾಮು ಜೋನ ರಾಗಿ ತೆನ್ನೆಬಡಿಯುವರು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ ಹುಲ್ಲೂ ಸಾಕು.

ಬೆಂಗಳೂರು ಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ರಾಗಿ ಮತ್ತು ಕುಷ್ಕೀ ಪೈರುಗಳ ತನೆ ಬಡಿಮುವರು.

—ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿನವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ದೇವನಹಳ್ಳಿ ತಾಲ್ಲೂಕಿನಲ್ಲಿ ವೈಶಾಖಿ ಭತ್ತದ ಬಿತ್ತನೆಯಾಗಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಬೆಂಗಳೂರು ಮತ್ತು ಕಾರ್ಕಾರ್ಡಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಬ್ಬಿನ ಕುಯ್ಯಲು ಆಗಿರುತ್ತದೆ.

10. ಕಾಲದ ಆಯುತಿಯು ಸ್ವಾಧಾರೀವಾಗಿ ಚೆನ್ನಾಗಿದೆ. ಆಹಾರ ಜಿನಸಿಗಳು ಸಾಕಾಷ್ಟಿವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಗುಡಿಬಂಡೆ ಹೊರ್ತು ಮಿಕ್ಕಿನ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ವೈಶಾಖಿ ಭತ್ತ, ಮತ್ತು ಮುಳಬಾಗಲು ಮತ್ತು ಗುಡಿಬಂಡೆಯಲ್ಲಿ ಕಬ್ಬು.

ಕುಯ್ಯಲಾದ ಪೈರುಗಳು—ಬವರಿಂಗ್‌ಪೇಟೆ, ಮುಳಬಾಗಲು, ಬಾಗೇಪಲ್ಲಿ ಮತ್ತು ಶ್ರೀನಿವಾಸಪುರಗಳಲ್ಲಿ ಅವರೆ ಮತ್ತು ತೊಗರಿ; ಕೋಲಾರ, ಚಿಂತಾಮಣಿ, ಮುಳಬಾಗಲು, ಚಿಕ್ಕಬಳ್ಳಾಪುರ, ಗೌರಿಬಿದನೂರು, ಶ್ರೀನಿವಾಸಪುರ ಮತ್ತು ಗುಡಿಬಂಡೆಯಲ್ಲಿ ಕಬ್ಬು; ಮತ್ತು ಶಿಡ್ಲಘಟ್ಟ ಮತ್ತು ಬಾಗೇಪಲ್ಲಿಯಲ್ಲಿ ರಾಗಿ.

ಉತ್ಪತ್ತಿಯ ಅಂದಾಜು :—

ಚಿಂತಾಮಣಿ ...	ಭತ್ತ ...	... 6 ರಿಂದ 12 ಆಣೆ ವರಿಗೆ.
	ಹುರುಳಿ ...	... 4 ರಿಂದ ಡಿಟೋ
	ಕಬ್ಬು ...	... 4 ರಿಂದ ಡಿಟೋ
	ರಾಗಿ ...	... 12 ಆಣೆ.
ಶ್ರೀನಿವಾಸಪುರ ಮತ್ತು ಗುಡಿಬಂಡೆಯಲ್ಲಿ ...		... 8 ರಿಂದ 12 ಆಣೆ ವರಿಗೆ.
ಬವರಿಂಗ್‌ಪೇಟೆಯಲ್ಲಿ ...		... 6 ರಿಂದ 12 ,,
ಕೋಲಾರ, ಮುಳಬಾಗಲು, ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರುಗಳಲ್ಲಿ ...		12 ಆಣೆ.
ಬಾಗೇಪಲ್ಲಿಯಲ್ಲಿ ...		... 10 ,,

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿಗಳು ಸಾಕು.

11. ಮುಳಬಾಗಲು ತಾಲ್ಲೂಕಿನಲ್ಲಿ ಹೊರಗಿನಿಂದ ಬ್ಲಾಮೆಲೆ ಆಗಿ ಬಂದ ಕಾಲರಾ ಕೇಸು ಒಂದು ಮತ್ತು ಬವರಿಂಗ್‌ಪೇಟೆ ತಾಲ್ಲೂಕಿನಲ್ಲಿ ಪ್ಲೇಗ್ ಕೇಸುಗಳು; ಕೆಲವು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—(1)—ಕುಯ್ಯಲು, (2)—ವೈಶಾಖಿ ಭತ್ತದ ಬಿತ್ತನೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆ. ಆದರೆ, ತಿಪಟೂರು ತಾಲ್ಲೂಕಿನಲ್ಲಿ ಕೆಲವು ಭಾಗಗಳಲ್ಲಿ ಭತ್ತದ ಪೈರ ಕೆಟ್ಟಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ತುಮಕೂರು, ಮಧ್ವಗಿರಿ, ತಿಪಟೂರು ಮತ್ತು ತುರುವೇಕೆರೆಗಳಲ್ಲಿ ಭತ್ತ.

ಕುಯ್ಯಲಾದ ಪೈರುಗಳು—ತುಮಕೂರು, ಸೀರ್ಯ ಮತ್ತು ಕುಣಿಗಲ್ ಇವುಗಳಲ್ಲಿ ಭತ್ತ; ಮಧ್ವಗಿರಿ, ಶೀರ್ಯ, ಕುಣಿಗಲ್ ಮತ್ತು ತುರುವೇಕೆರೆ ಇವುಗಳಲ್ಲಿ ಕಬ್ಬು; ಶೀರ್ಯ, ಗುಬ್ಬಿ ಮತ್ತು ತಿಪಟೂರು ಇವುಗಳಲ್ಲಿ ಕಡಲೆ; ಗುಬ್ಬಿ, ತಿಪಟೂರು ಮತ್ತು ತುರುವೇಕೆರೆ ಇವುಗಳಲ್ಲಿ ಅವರೆ; ತಿಪಟೂರು ಮತ್ತು ಕುಣಿಗಲ್ ಇವುಗಳಲ್ಲಿ ತೊಗರಿ ಮತ್ತು ಹರಳು; ಮತ್ತು ಪಾವಗಡದಲ್ಲಿ ಕಡಲೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸು ಸಾಕು.

11. ಶಿವಮೊಗ್ಗ ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯಲ್ಲಿ ಛಳಿ ಜ್ವರ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಗುಂಡ್ಲುಪೇಟೆ ವತ್ತು ನಂಜನಗೂಡು ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು, ಕಾರಭತ್ತವನ್ನು ಬಿತ್ತಲು ತಯಾರ್ಮಾಡುತ್ತಿದ್ದಾರೆ.

ನಿಂತಿರುವ ಪೈರುಗಳು—ಡಿಸ್ಟ್ರಿಕ್ಟಿನೆಲ್ಲಲ್ಲಾ ಚೆನ್ನಾಗಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು ವತ್ತ ಅವುಗಳ ಉತ್ಪತ್ತಿ:—

ಚಾಮರಾಜನಗರ—ಹರಳು, ಹುರುಳಿ, ಕಡಲೆ, ಕೊತ್ತುಂಬರಿ ಮತ್ತು ಕಬ್ಬು.

ಹೆಗ್ಗಡದೇವನಕೋಟೆ—ಅವರೆ ಮತ್ತು ಭತ್ತ.

ಟಿ ನರಸೀಪುರ—ಕಬ್ಬು.

ಮಳವಳ್ಳಿ—ಭತ್ತ ಮತ್ತು ರಾಗಿ 4 ರಿಂದ 12 ಆಣೆ ವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ರೈತರಲ್ಲಿಯೂ, ವ್ಯಾಪಾರಿಗಳಲ್ಲಿಯೂ, ಸಾಕಾದಷ್ಟು ಆಹಾರ ಜೆನಸು ಇವೆಯೆಂದು ರಿಪೋರ್ಟಾಗಿದೆ.

11. ಮೈಸೂರು, ಚಾಮರಾಜನಗರ ಗುಂಡ್ಲುಪೇಟೆ, ನಂಜನಗೂಡು ಮತ್ತು ಮಳವಳ್ಳಿ ಇವುಗಳ ಕೆಲವು ಭಾಗಗಳಲ್ಲಿ ಕಾಲರಾವೂ ಮತ್ತು ಹೆಗ್ಗಡದೇವನಕೋಟೆಯ ಕೆಲವು ಭಾಗಗಳಲ್ಲಿ ಜ್ವರವೂ ಇವು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಅರಕಲ್‌ಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಇನ್ನೂ ಉಳುತ್ತಿದ್ದಾರೆ. ಕುಯ್ಯಲು ಮುಗಿದು ಬರುತ್ತಿದೆ.

ನಿಂತಿರುವ ಪೈರುಗಳು—ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲಿ ನೈಶಾಖಿ ಭತ್ತ ಮತ್ತು ಕಬ್ಬು, ಮತ್ತು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಕಡಲೆ ಮತ್ತು ಹರಳು, ಇವುಗಳು ಸುಮಾರಾಗಿ ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ:—

ಬೇಲೂರು—ಭತ್ತ 12 ಆಣೆ.

ಚೆನ್ನರಾಯಪಟ್ಟಣ—ರಾಗಿ, ಭತ್ತ, ಕಬ್ಬು, ಅವರೆ ಮತ್ತು ಕಡಲೆ.

ಹೊಳೇನರಸೀಪುರ—ರಾಗಿ ಮತ್ತು ಭತ್ತ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸು ಸಿಕ್ಕುತ್ತವೆ.

11. ಅರಕಲ್‌ಗೂಡು ಮತ್ತು ಹೊಳೇನರಸೀಪುರ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗೂ, ಹೊಳೇನರಸೀಪುರ ಮತ್ತು ಚೆನ್ನರಾಯಪಟ್ಟಣ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾವೂ ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಶೀತ ಜ್ವರವೂ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಹುಲ್ಲೂ, ನೀರೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕಬ್ಬನ್ನು ನಾಟಲು, ಶಿವಮೊಗ್ಗ ತಾಲ್ಲೂಕಿನಲ್ಲಿ ಭೂವಿಯನ್ನು ತಯಾರ್ಮಾಡುತ್ತಿದ್ದಾರೆ.

ಶಿವಮೊಗ್ಗ, ಚೆನ್ನಗಿರಿ, ಶಿಕಾರಿಪುರ, ಸೊರಬ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡುತ್ತಿದ್ದಾರೆ.

ನಿಂತಿರುವ ಪೈರುಗಳು—ಶಿವಮೊಗ್ಗ, ಶಿಕಾರಿಪುರ ಮತ್ತು ಚೆನ್ನಗಿರಿ ತಾಲ್ಲೂಕುಗಳಲ್ಲಿ ಕಡಲೆ; ಚನ್ನಗಿರಿ ತಾಲ್ಲೂಕಿನಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಕಬ್ಬು ಮತ್ತು ಶಿಕಾರಿಪುರ ತಾಲ್ಲೂಕಿನಲ್ಲಿ ಹೆಸರು, ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಚೆನ್ನಗಿರಿ ಮತ್ತು ಶಿಕಾರಿಪುರದ ತಾಲ್ಲೂಕುಗಳಲ್ಲಿ ಭತ್ತ, ಸೊರಬ ತಾಲ್ಲೂಕಿನಲ್ಲಿ ಹರಳು ಮತ್ತು ಚೆನ್ನಗಿರಿ ತಾಲ್ಲೂಕಿನಲ್ಲಿ ರಾಗಿ ಮತ್ತು ಜೋಳ, ಇವುಗಳ ಕುಯ್ಯಲು ಮುಗಿದು ಇದೆ. ಹೊನ್ನಾಳಿ ತಾಲ್ಲೂಕಿನಲ್ಲಿ ತೊಗರಿ, ಕಡಲೆ ಅವರೆ ಮತ್ತು ಅರಳೀ ಇವುಗಳ ಕುಯ್ಯಲೂ ಮತ್ತು ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಅಡಿಕೆಯ ಕಟಾವೂ, ನಡಿಯುತ್ತಾ ಇದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.
11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.
12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.
9. ಬಿತ್ತನೆಯಾದ ಪೈರುಗಳು—ಮೂಡಿಗೆರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸ್ವಲ್ಪವಾಗಿ ಕೋಡೇ ಬಿತ್ತನು.
ನಿಂತಿರುವ ಪೈರುಗಳು—ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಕಬ್ಬು; ಕೊಪ್ಪದ ತಾಲ್ಲೂಕಿನಲ್ಲಿ ಕಬ್ಬು ಮತ್ತು ಮೆಣಸು; ಕಡೂರು ತಾಲ್ಲೂಕಿನಲ್ಲಿ ಜೋಳ, ಸಾರ್ ಬತ್ತ, ಗೋಧಿ, ಕಡಲೆ, ಕಬ್ಬು ಮತ್ತು ತೊಗರಿ; ಎಡೇಹಳ್ಳಿ ಸಬ್ ತಾಲ್ಲೂಕಿನಲ್ಲಿ ಕಬ್ಬು ಮತ್ತು ಅಡಿಕೆ, ಇವುಗಳು ಸುಮಾರಾಗಿ ಒಳ್ಳೇ ಸ್ಥಿತಿಯಲ್ಲಿವೆ ಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—
ತರೀಕೆರೆ ತಾಲ್ಲೂಕು ಹುರುಳಿ, ಕಡಲೆ ಮತ್ತು ಕಬ್ಬು, ಉತ್ಪತ್ತಿ 4 ರಿಂದ 12 ಆಣೆ ವರಿಗೆ.
ಚಿಕ್ಕಮಗಳೂರು ತಾಲ್ಲೂಕು—ಕಬ್ಬು ಮತ್ತು ಕಡಲೆ, ಉತ್ಪತ್ತಿ 8 ಆಣೆ.
ಕಡೂರು ತಾಲ್ಲೂಕು—ಅವರೆ, ಕಡಲೆ, ಕಬ್ಬು ಮತ್ತು ತೊಗರಿ, ಉತ್ಪತ್ತಿ 4 ರಿಂದ 12 ಆಣೆ ವರಿಗೆ.
ಎಡೇಹಳ್ಳಿ ಸಬ್ ತಾಲ್ಲೂಕು—ಕಬ್ಬು ಮತ್ತು ಅಡಿಕೆ, ಉತ್ಪತ್ತಿ ಸುಮಾರು 10 ಆಣೆ.
ಕೊಪ್ಪ ತಾಲ್ಲೂಕು—ಕಬ್ಬು, ಉತ್ಪತ್ತಿ 10 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಧ್ಯಕ್ಕೆ ಸಾಕು.
11. ಚಿಕ್ಕಮಗಳೂರು ತಾಲ್ಲೂಕಿನ ಸಿರಿಬಳಲೂನಲ್ಲಿ ಪ್ಲೇಗ್ ಕಾಣಿಸಿಕೊಂಡಿದೆಯೆಂದು ರಿಪೋರ್ಟಾಗಿರುವದೂ, ಮತ್ತು ಕಡೂರು ತಾಲ್ಲೂಕಿನ ಸಕ್ಕೇಪಟ್ಟಣದಲ್ಲಿ ಪ್ಲೇಗ್ ಇನ್ನೂ ಇರುವದೂ, ಮತ್ತು ಎಡೇಹಳ್ಳಿ ಊರಿನಲ್ಲಿ ಛಳಿ ಜ್ವರವು ಮತ್ತು ಪೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿಯೂ ಮತ್ತು ಶೃಂಗೇರಿ ಮತ್ತು ಎಡೇಹಳ್ಳಿ ಸಬ್ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಸಿಡುಬು ಇನ್ನೂ ಇರುವದೂ, ಇವುಗಳು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.
12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಆದರೆ, ಕಡೂರು ತಾಲ್ಲೂಕಿನ ಬೀರೂರು ಹೋಬಳಿಯ ಹೊಗರೇ ಹಳ್ಳಿ ಗ್ರಾಮದಲ್ಲಿ ಕೆಲವು ದನಗಳಿಗೆ "ದೊಡ್ಡ ಪಿತ್ಯ" ವೆಂಬ ರೋಗವು ತಗಲಿದೆಯೆಂದೂ, ಅಂಥಾವುಗಳನ್ನು ಪ್ರತ್ಯೇಕವಾಗಿ ಬಿಂಗಡಿಸಿ ಇಟ್ಟು ಇದ್ದಾರೆ ಯೆಂದೂ ಮತ್ತು ಈ ಸಂಗತಿಗಳನ್ನು ಕ್ಯಾಟಲ್ ಡಿಸೀಸ್ ಇನ್ಸ್ಪೆಕ್ಟರವರಿಗೆ ತಿಳಿಯಪಡಿಸಿ ಇದೆಯೆಂದೂ, ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.
9. ನಿಂತಿರುವ ಪೈರುಗಳ ಸ್ಥಿತಿ—ಚೆನ್ನಾಗಿದೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—
ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಕಡಲೆ, ಉತ್ಪತ್ತಿ 6 ರಿಂದ 12 ಆಣೆ ವರಿಗೆ.
ಹಿರಿಯೂರು ತಾಲ್ಲೂಕಿನಲ್ಲಿ ಕಡಲೆ ಮತ್ತು ಹೊಗೇಸೊಪ್ಪು, ಉತ್ಪತ್ತಿ 4 ಆಣೆ.
ಹೊಳಲ್ಕೆರೆ ತಾಲ್ಲೂಕಿನಲ್ಲಿ ಅವರೆ ಮತ್ತು ಕೊತ್ತುಂಬರಿ, ಉತ್ಪತ್ತಿ 6 ರಿಂದ 12 ಆಣೆ ವರಿಗೆ.
ಜಗಳೂರು ತಾಲ್ಲೂಕಿನಲ್ಲಿ ಬಿಳೀ ಜೋಳ, ಉತ್ಪತ್ತಿ 8 ರಿಂದ 12 ಆಣೆ ವರಿಗೆ.
ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ತೊಗರಿ, ಉತ್ಪತ್ತಿ 8 ರಿಂದ 12 ಆಣೆ ವರಿಗೆ.
ಹೊಸದುರ್ಗದ ತಾಲ್ಲೂಕಿನಲ್ಲಿ ವೆಣಿಸಿನಕಾಯಿ, ಉತ್ಪತ್ತಿ 6 ರಿಂದ 12 ಆಣೆ ವರಿಗೆ.
ಹರಿಹರ ಸಬ್ ತಾಲ್ಲೂಕಿನಲ್ಲಿ ಅರಳಿ, ಉತ್ಪತ್ತಿ 12 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.
11. ಜನಾರೋಗ್ಯವು ಚೆನ್ನಾಗಿದೆ.
12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಮಾರ್ಚ್ 4ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರವಿನ್ಯೂ ಕಮಿಷನರ.